ಉತ್ತರ		Answer	
ಕೆ.ಆರ್.ನಗರ	1	K.R. Nagar	1
ಚಾಮರಾಜನಗರ			
ಚಾಮರಾಜನಗರ	4	Chamarajanagar	2
ಮಂಡ್ಯ			
ಮಂಡ್ಯ	1	Mandya	1
ಹಾಸನ			
ಹಾಸನ	3	Hassan	3
ಆಲೂರು	2	Alur	2
ಉಡುಪಿ			
ಕುಂದಾಪುರ	1	Kundapura	1
ಬೆಳಗಾಂ			
ಬೈಲಹೊಂಗಲ	1	Bailahongal	1
ಬಿಜಾಪುರ	1	Bijapur	1
ಬಾಗಲಕೋಟೆ			
ಬೀಳಗಿ	1	Bilagi	1
ಜಮಖಂಡಿ	1	Jamakandi	1
ಬನಹಟ್ಟಿ	2	Banahatti	2
ಗದಗ			
ನರಗುಂದ	1	Naragund	1

ಕಂದಾಯ ಜಮೀನಿನ ವಿವರ

152

ಶ್ರೀ ಗೂಳಿಹಟ್ಟಿ ಡಿ.ಶೇಖರ (ಹೊಸದುರ್ಗ)

ಅ) ಚಿತ್ರದುರ್ಗ ಜಿಲ್ಲೆ, ಹೊಸದುರ್ಗ ತಾಲ್ಲೂಕಿನಲ್ಲಿ ಗೊರವಿನಕಲ್ಲು ಗ್ರಾಮದ ರಿ.ಸ.ನಂ.86ರಲ್ಲಿರುವ ಸರ್ಕಾರಿ ಕಂದಾಯ ಜಾಗವೆಷ್ಟು; ಆ ಪೈಕಿ ಅರಣ್ಯ ಇಲಾಖೆಗೆ ಸಿ ಮತ್ತು ಡಿ ಭೂಮಿಯನ್ನು ಹಸ್ತಾಂತರಿಸಿರುವ ಜಾಗವೆಷ್ಟು;

ಆ) ಹಾಗಿದ್ದಲ್ಲಿ, ಯಾವ ವರ್ಷ ಅರಣ್ಯ ಇಲಾಖೆಗೆ ಹಸ್ತಾಂತರ ಮಾಡಲಾಗಿದೆ;

ಇ) ಸದರಿ ಗ್ರಾಮದ ರಿ.ಸ.ನಂ.86 ರಲ್ಲಿ ಎಷ್ಟು ಎಕರೆ ಪ್ರದೇಶವನ್ನು ಬಗರ್ ಹಕುಂ ಸಮಿತಿಯಿಂದ ಎಷ್ಟು ರೈತರಿಗೆ ಜಮೀನು ವಿತರಿಸಲಾಗಿದೆ; ಯಾರ್ಯಾರಿಗೆ ಮಂಜೂರಾಗಿದೆ ಹಾಗೂ ಯಾವ ವರ್ಷದಲ್ಲಿ ಮಂಜೂರಾಗಿದೆ;

ಈ) ಇದರಲ್ಲಿ ಎ ಖರಾಬು, ಬಿ ಖರಾಬುಗಳಲ್ಲಿ ಎಷ್ಟು ಎಕರೆ ಸಾಗುವಳಿ ಚೀಟಿ ನೀಡಿದೆ; ಎ ಖರಾಬು, ಬಿ ಖರಾಬು ಎಂದರೆ ಏನು; ಇದಕ್ಕೆ ಇರುವ ಮಾನದಂಡಗಳೇನು; ಬಿ ಖರಾಬು ಜಾಗ ಹಂಚಿಕೆ ಮಾಡಬಹುದೇ (ವಿವರ ನೀಡುವುದು)?

ಶ್ರೀ ಕೆ.ಎಸ್.ಈಶ್ವರಪ್ಪ (ಉಪ ಮುಖ್ಯಮಂತ್ರಿಗಳು)

ಅ) ಚಿತ್ರದುರ್ಗ ಜಿಲ್ಲೆ, ಹೊಸದುರ್ಗ ತಾಲ್ಲೂಕು, ಕಸಬಾ ಹೋಬಳಿ ಗೊರವಿನಕಲ್ಲು ಗ್ರಾಮದ ರಿ.ಸ.ನಂ.86ರಲ್ಲಿರುವ 444-32 ಎಕರೆ ಒಟ್ಟು ವಿಸ್ತೀರ್ಣವಿದ್ದು, ಈ ಪೈಕಿ 388-21 ಎಕರೆ 'ಸಿ' ಮತ್ತು 'ಡಿ' ವರ್ಗದ ಭೂಮಿ ಅರಣ್ಯ ಇಲಾಖೆಗೆ ಹಸ್ತಾಂತರಿಸಲಾಗಿದೆ.

ಆ) ಸರ್ಕಾರದ ಆದೇಶ ಸಂ.ಆರ್‌ಡಿ 106 ಎಲ್‌ಜಿಪಿ 88, ದಿನಾಂಕ: 27-1-1995 ರಂತೆ ಎಂ.ಆರ್.ನಂ.2/1998-99, ದಿನಾಂಕ: 26-8-1998ರಲ್ಲಿ ಅರಣ್ಯ ಇಲಾಖೆಗೆ ವರ್ಗಾಯಿಸಲಾಗಿದೆ.

ಇ) ಚಿತ್ರದುರ್ಗ ಜಿಲ್ಲೆ, ಹೊಸದುರ್ಗ ತಾಲ್ಲೂಕು, ಕಸಬಾ ಹೋಬಳಿ ಗೊರವಿನಕಲ್ಲು ಗ್ರಾಮದ ರಿ.ಸ.ನಂ.86ರಲ್ಲಿ ಬಗರ್ ಹುಕುಂ ಸಮಿತಿಯಿಂದ ಯಾವುದೇ ಜಮೀನನ್ನು ನೀಡಿರುವುದಿಲ್ಲ.

ಈ) ಗೊರವಿನಕಲ್ಲು ಗ್ರಾಮದ ರಿ.ಸ.ನಂ.86ರಲ್ಲಿ 'ಬಿ' ಖರಾಬು ಮಾತ್ರ ಇದ್ದು, 'ಎ' ಖರಾಬು ಇರುವುದಿಲ್ಲ. 1980-81 ರಲ್ಲಿ ಅಸ್ತಿತ್ವದಲ್ಲಿದ್ದ ಭೂ ಮಂಜೂರಾತಿ ಸಮಿತಿಯಲ್ಲಿ ಎಲ್‌ಎನ್‌ಡಿ/ಸಿಆರ್.22/1980-81ರ ಪ್ರಕಾರ 51-00 ಎಕರೆಯನ್ನು 27 ಜನರಿಗೆ ಮಂಜೂರಾತಿ ನೀಡಿ ಸಾಗುವಳಿ ಚೀಟಿ ನೀಡಲಾಗಿರುತ್ತದೆ.

'ಎ' ಖರಾಬು ಅಂದರೆ ಸಾಗುವಳಿಗೆ ಯೋಗ್ಯವಾದ ಜಮೀನು

'ಬಿ' ಖರಾಬು ಅಂದರೆ ಸಾರ್ವಜನಿಕರ ನಿರ್ದಿಷ್ಟ ಉದ್ದೇಶಕ್ಕಾಗಿ ಮೀಸಲಿರಿಸಿದ ಸರ್ಕಾರಿ ಜಮೀನುಗಳಾಗಿರುತ್ತವೆ.